ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ನಮ್ಮ ಮುಂದೆ ಹೋಗುತ್ತಿದ್ದ ಇನ್ನೊಂದು ಬಸ್ಸನ್ನು ಹಿಂದಿಕ್ಕಲು ಹೋಗಿ ಬಸ್ಸನ್ನು ಒಮ್ಮೆಲೆ ಕಚ್ಚಾ ರಸ್ತೆಗೆ ಇಳಿಸಿದ್ದರಿಂದ ಬಸ್ಸ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದಲ್ಲಿ ಇರುವ ಮಣ್ಣಿನ ಗುಂಡಿಗೆ ಎಡಮಗ್ಗಲಾಗಿ ಪಲ್ಟಿಯಾಗಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ತಕ್ಷಣ ಇನ್ನೊಂದು ಬಸ್ಸಿನಲ್ಲಿ ಬರುತ್ತಿದ್ದ ಜನರು ನಮ್ಮನ್ನು ಉಪಚರಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತವಾಗಿದ್ದರಿಂದ ಕೆ ಬಿ ವೀರೇಶ್‌ಗೆ ಎರಡು ಕೈಗಳ ಭುಜಗಳಿಗೆ ಮುಖಕ್ಕೆ, ಎದೆಗೆ ತಲೆಗೆ ಬಲವಾದ ಪೆಟ್ಟು ಬಿದ್ದು ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಕೆ ಬಿ ಮಲ್ಲಿಕಾರ್ಜುನರವರಿಗೆ ಬಲವಾದ ಪೆಟ್ಟು ಬಿದ್ದು ಕಾಲು ಮುರಿದಿತ್ತು ಎಂದರೆ ಸರಿಯಲ್ಲ. ಬಿ ವೀರೇಶ್ ರವರಿಗೆ ಬಲಗಾಲಿನ ಹತ್ತಿರ ಪೆಟ್ಟು ಬಿದ್ದು ಹಾಗೂ ಶಿವಮೂರ್ತಯ್ಯರವರಿಗೆ ತಲೆಗೆ ಪೆಟ್ಟು ಬಿದ್ದು ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಮತ್ತು ಉಳಿದವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ನಂತರ ವೀರೇಶ್ ಮತ್ತು ಶಿವಮೂರ್ತಯ್ಯ ರವರನ್ನು ಒಂದು ಆ್ಯಂಬ್ಯೂಲೆನ್ಸ ನಲ್ಲಿ ತೆಲಗಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಉಳಿದ ಗಾಯಾಳುಗಳಾದ ಸತೀಷ ಕೆ ಬಿ ವೀರೇಶ್ ಕೆ ಬಿ ಮಲ್ಲಿಕಾರ್ಜುನ ವೀರಭದ್ರಪ್ಪ ರವರುಗಳನ್ನು ಒಂದು ವಾಹನದಲ್ಲಿ ಹರಿಹರ ಸರ್ಕಾರಿ ಆಸ್ಪತ್ರೆಗೆ ಮಧ್ಯಾಹ್ನ 12.30 ಗಂಟೆಗೆ ಹೋಗಿ ಚಿಕಿತ್ಸೆಗೆ ದಾಖಲಾಗಿರುತ್ತೇವೆ ಎಂದರೆ ಸರಿಯಲ್ಲ. ವೈದ್ಯರು ಕೆ ಬಿ ವೀರೇಶ್ ರವರನ್ನು ಪರೀಕ್ಷಿಸಿದಾಗ ಆತ ಮೃತಪಟ್ಟಿರುತ್ತಾನೆ ಅಂತಾ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಕೆ ಬಿ ಮಲ್ಲಿಕಾರ್ಜನ ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಅಪಘಾತವು ಕೆ ಎ 18 6508 ನೇ ಮಿನಿಬಸ್ಸಿನ ಚಾಲಕ ಆರ್ ಎಂ ವೀರೇಶ್ ರವರ ಅತೀವೇಗ ಅಜಾಗರೂಕತೆಯ ಚಾಲನೆಯಿಂದಾಗಿ ಆಗಿರುತ್ತದೆ ಎಂದು ಚಾ ಸಾ 1 ರವರು ದೂರನ್ನು ಕೊಟ್ಟಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 18.12.2020 ರಂದು ಅಪಘಾತದ ಸ್ಥಳ ದಿಂದ ಚಿಕಿತ್ಸೆಗೆಂದು ಚಾ ಸಾ 10 ಮತ್ತು ಚಾ ಸಾ 11 ರವರನ್ನು ಆ್ಯಂಬ್ಯೂಲೆನ್ಸ ನಲ್ಲಿ ತೆಲಗಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತಾರೆ ಆದರೆ ಅವರು ತೆಲಗಿ ಆಸ್ಪತ್ರೆಗೆ ಹೋಗದೇ ನೇರವಾಗಿ ದಾವಣಗೆರೆ ಎಸ್ ಎಸ್ ಆಸ್ಪತ್ರೆಗೆ ಹೋಗಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಸದರಿ ಅಪಘಾತದ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪಲು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಯು ಕೆ ಎಂ ವಕೀಲರಿಂದಃ- ಇಲ್ಲ.**

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| ಸಿಡಬ್ಲ್ಯೂ | 5 | ಪಿಡಬ್ಲ್ಯೂ | 2 |
|---|---|---|---|

ಸಾಕ್ಷಿದಾರರ ಹೆಸರು : ಮೇಘರಾಜ

ತಂದೆಯ ಹೆಸರು : ನಾಗನಗ

ವಯಸ್ಸು : 58 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 05.03.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬೆಳಗನೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತರ ಪರಿಚಯ ಇರುತ್ತದೆ. 2018 ನಲ್ಲಿ ಜಗಳ ಆಗಿರುತ್ತದೆ. ನಮ್ಮ ತಂದೆ ನಾರನಗೌಡ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ನಮ್ಮ ಭೂಮಿ ಉಳುಮೆ ಮಾಡಲು ಹೋದಾಗ ಗಲಾಟೆ ಆಗಿರುತ್ತದೆ.ನಾನು ಮನೆಯ ಹತ್ತಿರ ಇದ್ದೆ ಆಗ ಬಸವರಾಜ ಕುಬೇರ ಗೌಡ ಟೀ ಕುಡಿಯುತ್ತಾ ಮನೆಯಲ್ಲಿ ಇದ್ದೆವು. ಆಗ ಶ್ರೀಮಾತಮ್ಮ ಬಂದು ನನ್ನ ತಾಯಿಯ ಕೂದಲು ಹಿಡಿದು ಎಳೆದರು ಕುಬುಸ ಹಿಡಿದು ಹರಿದರು. ಕುಡುಗೋಲು ಹಿಡಿದುಕೊಂಡು ಚಂದ್ರಪ್ಪ ಕುಬೇರ ಗೌಡನ ಎಡಗೈಗೆ ಹೋಡೆದನು. ಕಣಗ ದಿಂದ ನನಗೆ ಸೊಂಟಕ್ಕೆ ಕೈಗೆ ಕಾಲಿಗೆ ಹೊಡೆದಿರುತ್ತಾರೆ. ಚಿಗಟೇರಿ ಪೋಲೀಸ ಠಾಣೆಗೆ ಹೋಗಿರುತ್ತೇನೆ. ನನ್ನ ತಾಯಿಯ ಹಣೆಗೆ ಪೆಟ್ಟು ಆಗಿರುತ್ತದೆ. ನಂತರ ದೂರು ಕೊಟ್ಟು ಚಿಗಟೇರಿ ಆಸ್ಪತ್ರೆಗೆ ಹೋದೆವು. ಗಲಾಟೆ ಮಲ್ಲಿಕಾರ್ಜುನ ಗೌಡ ಬಿಡಿಸಿರುತ್ತಾರೆ. ಸಂತೋಷ ಕುಬೇರ ಗೌಡ ಕೂಡ ಗಲಾಟೆಯನ್ನು ಬಿಡಿಸಿರುತ್ತಾರೆ. ಈ ವಿಚಾರವಾಗಿ ದೂರು ಕೊಡಲಾಗಿದೆ.

**ಈ ವೇಳೆಯಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸದರಿ ಸಾಕ್ಷಿಯು ಪೋಲೀಸರಿಗೆ ಕೊಟ್ಟಿರುವುದಾಗಿ ಹೇಳಲಾದ ಹೇಳಿಕೆಯನ್ನು ಪರಿಶೀಲಿಸಲಾಯಿತು. ಅದರಲ್ಲಿರುವ ಸಂಗತಿಗಳಿಗೆ ವ್ಯತಿರಿಕ್ತವಾಗಿ ಸಾಕ್ಷಿದಾರರು ಪುರಾವೆ ಹೇಳಿರುವುದರಿಂದ ಇವರನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ನ್ಯಾಯಾಲಯವು ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿಯನ್ನು ಕಲ್ಪಿಸಲಾಗಿದೆ.)**

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 5 | ಪಿಡಬ್ಲ್ಯೂ | 2 |

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-**

ಜಾಗಳ ಆಗುತ್ತಿದ್ದಾಗ ಅಂಬಿಕ ಜಗಳ ಬಿಡಿಸಲು ಬಂದರು ಎಂದರೆ ಸರಿ. ಆಗ ಅಂಬಿಕಮ್ಮನಿಗೆ ಕಿವಿಗೆ ಗಾಯ ಆಯಿತು ಎಂದರೆ ಸರಿ. ಬಸವನಗೌಡರಿಗೆ ನಾರಪ್ಪ ಕೈ ಕಾಲಿಗೆ ಹೊಡೆದಿರುತ್ತಾರೆ. ಅವರಿಗೆ ಪೆಟ್ಟು ಆಯಿತು ಎಂದರೆ ಸರಿ. ಜಮೀನಿನ ವಿಚಾರಕ್ಕೆ ಬಂದರೆ ಅಲ್ಲಿಯೇ ಹೂತುಹಾಕುತ್ತೇವೆ ಎಂದು ಬೆದರಿಸಿರುತ್ತಾರೆ ಎಂದರೆ ಸರಿ. ಅಲ್ಲಿಕಾರ್ಜುನ ಸಂತೋಷ ಜಗಳ ಬಿಡಿಸಿ ಕಳುಹಿಸಿರುತ್ತಾರೆ ಎಂದರೆ ಸರಿ. ಹಲ್ಲೆಗೆ ಬಳಸಿದ ಕಣಗ ಮತ್ತು ಕುಡುಗೋಲು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ B.G.B. ವಕೀಲರಿಂದಃ-**

ನಾವು ಮತ್ತು ಆರೋಪಿತರು ಅಣ್ಣ ತಮ್ಮಂದಿರು ಎಂದರೆ ಸರಿ. ಆಸ್ತಿ ವಿಚಾರದಲ್ಲಿ ಇದೆ ನ್ಯಾಯಾಲಯದಲ್ಲಿ ಒಂದು ದಿವಾಣಿ ಪ್ರಕರಣ ಇದೆ ಎಂದರೆ ಸರಿ. ಅದು ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಗಲಾಟೆ ಆದ ದಿನಾಂಕ 17.06.2018 ಇರುತ್ತದೆ. ಗಲಾಟೆ ದಿನ ನಾನು ನನ್ನ ಹೊಲಕ್ಕೆ ಹೊರಟ್ಟಿದ್ದೆ. ಹೊಲದಲ್ಲಿ ಜಗಳ ಆಗಿರುತ್ತದೆ. ಹೊಲದಲ್ಲಿ ಚಂದ್ರಪ್ಪ ಬಸವರಾಜಪ್ಪ ಹೊಡೆದಿರುತ್ತಾರೆ. ನಮ್ಮ ಊರಿನಿಂದ ಹೊಲ ಒಂದು ಫರ್ಲಾಂಗ ದೂರ ಇದೆ. ಶ್ರೀಮಾತಮ್ಮನಿಗೆ ಆರೋಪಿ ನನ್ನ ತಾಯಿಗೆ  ಕೂದಲು ಹಿಡಿದು ಎಳೆದಾಡಿರುವುದಿಲ್ಲಾ ಗಲಾಟೆ ಆಗಿರುವುದಿಲ್ಲಾ ಎಂದರೆ ಸರಿಯಲ್ಲ. ಚಂದ್ರಪ್ಪ ಕಬೇರ ಗೌಡನ ಎಡಗೈಗೆ ಹೊಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ನನಗೆ ಕಣಗ ದಿಂದ ಚಂದ್ರಪ್ಪ, ನಾರಪ್ಪ ಕೊಟ್ರಪ್ಪ ಹೊಡೆದಿರುತ್ತಾರೆ. ಒಂದೇ ಕಣಗ ದಲ್ಲಿ ಮೂರು ಜನ ಹೊಡೆದಿರುತ್ತಾರೆ. ಸೊಂಟಕ್ಕೆ ಕೈ ಕಾಲು ತಲೆಗೆ ಬೆನ್ನಿಗೆ ಹೊಡೆದರು ನಾನು ನೆಲಕ್ಕೆ ಬಿದ್ದೆ. ರಕ್ತಗಾಯ ಆಗಿತ್ತು. ಬಟ್ಟೆಗೆ ಎಲ್ಲಾ ರಕ್ತ ಆಗಿತ್ತು. ರಕ್ತ ಆಗಿದ್ದ ಬಟ್ಟೆಯನ್ನು

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 5 | ಪಿಡಬ್ಲ್ಯೂ | 2 |

ಪೋಲೀಸರಿಗೆ ಕೊಟ್ಟಿರುತ್ತೇನೆ. ನನಗೆ ಆರೋಪಿತರು ಕೈಗೆ ಕಾಲಿಗೆ ಬನ್ನಿಗೆ ಹೊಡೆದರು ಅಂತಾ ಪೋಲೀಸರ ಹತ್ತಿರ ಹೇಳಿರುತ್ತೇನೆ. ಆರೋಪಿತರು ನನಗೆ ಯಾರು ಹೊಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ನನ್ನ ಹೆಂಡತಿಗೂ ಹೊಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ಕಿವಿಗೂ ಗಾಯ ಆಗಿರುವುದಿಲ್ಲಾ ಎಂದರೆ ಸರಿಯಲ್ಲ. ಹೊಲದ ವಿಚಾರಕ್ಕೆ ಬಂದರೆ ಇದೆ ಹೊಲದಲ್ಲಿ ಹುಗಿಯುತ್ತೇವೆ ಅಂತಾ ಹೆದರಿಸಿಲ್ಲಾ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯಶಬ್ದಗಳಿಂದ ಬೈದಿರುವುದಿಲ್ಲಾ ಎಂದರೆ ಸರಿಯಲ್ಲ. ದಿನಾಂಕ 17.06.2018 ರಂದು ಬೆಳಿಗ್ಗೆ 8 ಗಂಟೆಟೆ ಆರೋಪಿ ತರು ತಮ್ಮ ಹೊಲಕ್ಕೆ ಹೋಗಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಆರೋಪಿತರಿಗೆ ನಮ್ಮ ಹೊಲಕ್ಕೆ ಬರಬೇಡಿ ಅಂತಾ ನಾನು ನನ್ನ ಮಕ್ಕಳು ಸೇರಿ ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೊಡೆದ ಕಾರಣ ಅವರಿಗೆ ಗಾಯ ಆಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿರಿಗೆ ನಾವು 8 ಗಂಟೆಗೆ ಹೊಡೆದಿದ್ದು ಅವರು ನಮ್ಮ ಮೇಲೆ ಕೇಸ್ ಕೊಡುತ್ತಾರೆ ಅಂತಾ 8.30 ಗಂಟೆಗೆ ಆರೋಪಿತರು ನಮಗೆ ಹೊಡೆದಿರುತ್ತಾರೆ ಅಂತಾ ಸುಳ್ಳು ಕೇಸನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಪ್ಪ ನನ್ನ ತಾಯಿಗೆ ಹೊಡೆದರು ಅಂತಾ ಆರೋಪಿತರು ನಮಗೆ ಹೊಡೆದರು ಅಂತಾ ಹೊಸದಾಗಿ ಕಥೆ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕೇಸಿಗೆ ಪ್ರತಿರಕ್ಷ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲೀಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.